ಆಸ್ಪತ್ರೆ ಕಡೆ ಮುಖ ಮಾಡಿದರೂ ಚಂದ್ರು ಮಿಸುಕಾಡದೇ ಹಾಗೇ ನಿಂತದ್ದನ್ನು ನೋಡಿ 'ಹೊತ್ತಾಯ್ತುದೆ ನಡಿ ಮಗ. ಮೋಡ ಬ್ಯಾರೆ ಕರ್ರಗೆ ಗಂಟಾಕಂಡದೆ' ಎಂದ. ಟವೆಲ್ಲನ್ನು ತಲೆಗೆ ಸುತ್ತಿಕೊಂಡ ಚಂದ್ರು 'ಅಪ್ಪ ಆ ದ್ಯಾವರೇ ಇವತ್ತು ಇಂತ ಅವಕಾಶ ಕೊಟ್ಟಿರಂಗವ್ನೆ. ನೀನು ಅವ್ವಂಕಡೆ ನೋಡ್ಕೊ ನಾನು ಈ ಸಾವ್ಕಾರನ್ನ ನೋಡ್ಕತಿನಿ' ಎಂದು ಮಲ್ಲಣ್ಣನ ಉತ್ತರಕ್ಕೆ ಕಾಯದೇ ಸಾಹುಕಾರ್ ಬಸಪ್ಪನ ಹಿಂದೆ ನಡೆದನು. ಮಲ್ಲಣ್ಣ ಚಂದ್ರುವನ್ನು ಎಳಕೊಂಡು ಬಿಗಿದಪ್ಪಿಕೊಂಡು 'ಗೆದ್ದು ಬಾ ಮಗ' ಎಂದು ಬೆನ್ನು ತಟ್ಟಿದನು. ನೀಲವ್ವನ ಆರೋಗ್ಯ ತಪಾಸಣೆ ಮಾಡಿದ ಜಿಲ್ಲಾಸ್ಪತ್ರೆ ಡಾಕ್ಟರ್ ಮಲ್ಲಣ್ಣನಿಗೆ ಸಿಹಿ ಸುದ್ದಿ ನೀಡಿದರು. ಇನ್ನು ಕೆಲವೇ ದಿನಗಳಲ್ಲಿ ನೀಲವ್ವ ಮಾಮೂಲಿಯಂತೆ ಆಗುವ ಲಕ್ಷಣಗಳು ಕಾಣುತ್ತಿದೆ, ನಿಮ್ಮ ನೀಲವ್ವ ನಿಮಗೆ ಮತ್ತೆ ಸಿಗುತ್ತಾರೆ ಎಂದು ಹೇಳಿದರು. ಮಲ್ಲಣ್ಣ ಈ ಸಿಹಿ ಸುದ್ದಿಯನ್ನು ಚಂದ್ರುವಿಗೆ ಹೇಳಲು ಕಾತುರದಿಂದ ಕಾಯುತ್ತಿದ್ದನಾದರೂ ಮಗ ಹೋಗಿರುವ ಕೆಲಸ ಸರಿಯಾಗಿ ಮಾಡಿಕೊಂಡು ಬರುತ್ತಾನೋ ಇಲ್ಲವೋ ಎಂಬ ಭಯವೂ ಆವರಿಸಿ ಮಿಶ್ರ ಮನಃಸ್ಥಿತಿಯಲ್ಲಿ ನರಳುತ್ತಿದ್ದನು. ಆದರೂ ಎಲ್ಲೋ ಒಂದು ಕಡೆ ಚಂದ್ರುವಿನ ಬಗ್ಗೆ ಅತಿಯಾದ ವಿಶ್ವಾಸವಿತ್ತು. ಮಗನಿಗಾಗಿ ಕಾದು ಕುಳಿತ ಮಲ್ಲಣ್ಣನಿಗೆ ಮಗ ಕಂಡದ್ದು ರಾತ್ರಿ 11 ಗಂಟೆಗೆ. ಚಂದ್ರು ಮೊಗದಲ್ಲಿ ಯುದ್ಧ ಗೆದ್ದ ಸಂಭ್ರಮವಿತ್ತು. ಮಲ್ಲಣ್ಣನ ಮೊಗದಲ್ಲಿ ಅನುಮಾನದ ಒಂದು ಗೆರೆಯೂ ಮೂಡಲಿಲ್ಲ. ಚಂದ್ರುವನ್ನು ಎಳೆದೊಯ್ದು ನೀಲವ್ವನ ಬಳಿ ನಿಲ್ಲಿಸಿ 'ಅಮ್ಮೀ ನಿನ್ನಾನ ತೆಗ್ದೋನ ಪ್ರಾಣ ತೆಗ್ದು ಬಂದವ್ನೆ. ನಿನ್ನ ಸಂಕಟ ಸಮಾಪ್ತಿ ಆದಂಗೆಯ' ಎಂದನು. ಚಂದ್ರುವಿನ ಕಡೆ ತಿರುಗಿ 'ಮಗ, ನಿಮ್ಮವ್ವ ಎಲ್ಡ್ ವಾರದಲ್ಲಿ ಮೊದ್ಲಂಗಾಯ್ತುಳೆ ಅಂತ ಡಾಕುಟ್ರು ಹೇಳವ್ರೆ' ಎಂದು ತಬ್ಬಿಕೊಂಡನು. ಚಂದ್ರುವಿನ ಬಾಯಿಯಿಂದ ಸಾರಾಯಿ ವಾಸನೆ ಬಂದಿತು. ಆಶ್ಚರ್ಯದಿಂದ 'ಮಗ ಕುಡ್ಡಿದಿಯಾ' ಮಲ್ಲಣ್ಣನ ಪ್ರಶ್ನೆಗೆ 'ನೀನು ಹೇಳಿದಂಗೆ ಅವನ ಪ್ರಾಣ ತೆಗಿಯಕ್ಕಾಗ್ನಿಲ್ಲ. ಆದ್ರೆ ಅವನ ಮಾನ ತೆಗೆದಿವ್ನಿ. ಅವನ ಮಗಳ ಮಾನ ತೆಗೆದಿವ್ನಿ ಕನಪ್ಪಾ' ಎಂದು ಕಣ್ಣು ದೊಡ್ಡದಾಗಿಸಿಕೊಂಡ. ಮಲ್ಲಣ್ಣನಿಗೆ ಏನೂ ಅರ್ಥವಾಗಲಿಲ್ಲ. ಚಂದ್ರು ನೀಲವ್ವನ ಬಳಿ ಕೂರುತ್ತಾ 'ಈಗ ನನ್ನನ್ನೇನು ಕೇಳಬೇಡಪ್ಪ. ಆದ್ರೆ ಸಾವ್ಕಾರನ ಮೇಲೆ ಸೇಡು ತೀರಿಸಿಕೊಂಡು ಬಂದಿವ್ನಿ. ಅವ್ನು ನನ್ನವ್ವನ ಮಾನ ತೆಗ್ದ, ನಾನವ್ನ ಮಗಳ ಮಾನ ಕಳೆದು ಬಂದಿವ್ನಿ' ಎಂದ. ಮಲ್ಲಣ್ಣ ಕಕ್ಕಾಬಿಕ್ಕಿಯಾಗಿ ಚಂದ್ರುವಿನ ಕುತ್ತಿಗೆ ಪಟ್ಟಿ ಹಿಡಿದೆಳೆದು 'ಏನೇಳ್ತಿದಿಲಾ' ಅನ್ನಲು 'ಆ ಬೋಸುಡೀ ಮಗ ಕೈಗೆ ಸಿಗಲಿಲ್ಲ ಕನಪ್ಪಾ. ಆದ್ರೆ ಇಲ್ಲೆ ಹಾಸ್ಟೆಲ್‌ನಲ್ಲಿ ಓದ್ತಿರೋ ಅವ್ನ ಮಗಳು ಸಿಕ್ಲು; ಹೊಂಚಾಕಿ ಕೆಲಸ ಮುಗುಸ್ಬುಟ್ಟೆ. ನಮ್ಗಾದ ಸಂಕಟ ಈಗ ಅವನಿಗಾಯ್ತುದೆ' ಎಂದ ಚಂದ್ರು. ಮಲ್ಲಣ್ಣ ಮರು ಮಾತಾಡಲಿಲ್ಲ. ನೀಲವ್ವ ಇದ್ದಕ್ಕಿದ್ದಂತೆ ಜೋರಾಗಿ ಮೈ ಕೊಡವಿದಳು.

ಬೆಳಿಗ್ಗೆ ಸಾಹುಕಾರನ ಮನೆಯಲ್ಲಿ ಶೋಕ ಮಡುಗಟ್ಟಿತ್ತು. 'ಯಾರೂ ಅಳಗೂಡದು' ಎಂದು ಮನೆಯ ಹೆಂಗಸರಿಗೆಲ್ಲ ಸಾಹುಕಾರ ಹುಕುಂ ಹೊರಡಿಸಿದ್ದ. ಈ ಕಾರಣವಾಗಿ ಮನೆಯ ಸಂದಿಗುಂದಿಗಳಲ್ಲಿ ಸದ್ದಾಗದಂತೆ ಹೆಂಗಸರೆಲ್ಲರೂ ಕಣ್ಣೀರಿಡುತ್ತಿದ್ದರು. ಕೊಠಡಿಯೊಂದರಲ್ಲಿ ಸಾಹುಕಾರ ಕಿಟಕಿ ಬಾಗಿಲುಗಳೆಲ್ಲವನ್ನೂ ಜಡಿದುಕೊಂಡು ತನ್ನ ಮಗಳನ್ನು ವಿಚಾರಿಸುತ್ತಿದ್ದನು. 'ಅವನು ನೋಡಲು ಹೆಂಗಿದ್ದ. ಏನಾರ ಹೇಳಿದ್ನ' ಹೀಗೆ ವಿಚಾರಿಸಲು ಮಗಳು 'ಇಲ್ಲವೆಂದೇ' ಉತ್ತರಿಸುತ್ತಿದ್ದಳು. ಅತ್ತೂ ಅತ್ತೂ ಸುಸ್ತಾಗಿ ತನ್ನ ತಾಯಿ ಮಡಿಲಲ್ಲಿ ದೇಹ ಚೆಲ್ಲಿ ಮಲಗಿದ್ದಳು. ಪೊಲೀಸ್ ಕಂಪ್ಲೆಂಟ್ ಕೊಡಲು ಬೇಡಿಕೊಂಡಳಾದರೂ ಸಾಹುಕಾರ ಒಪ್ಪಲೇ ಇಲ್ಲ. 'ನಿನ್ನ ಮಾನಭಂಗವಾಗಿರೋ ಸುದ್ದಿ ಊರಿಗೆಲ್ಲ ಗೊತ್ತಾದ್ರೆ ನನ್ನ ಮಾನವೇನಾಗಬೇಕು. ಇವತ್ತಲ್ಲ ನಾಳೆ ಸಿಗ್ತನೆ. ಆ ನನ್ನ ಮಗನ್ನ ಸಿಗುದು ಇದೇ ಮನೆಗೆ ತ್ವಾರಣ ಕಟ್ತಿನಿ' ಎಂದನು. ಹೆಂಡತಿ ದುಃಖ ತಡೆಯಲಾರದೆ, 'ಅದೆಷ್ಟು ಹೆಣ್ಣು ಮಕ್ಕಳ ಬಲಿ ಪಡೆದಿದ್ಯೋ ಏನೋ, ನೀನು ಮಾಡಿರೋ